ನ್ಯಾಷನಲ್ ಸಹಕಾರ ಬ್ಯಾಂಕಿನ ಕೇಂದ್ರ ಕಛೇರಿಗೆ ಕಟ್ಟಡ ಇಲ್ಲದಿರುವ ಬಗ್ಗೆ

2779 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನ್ಯಾಷನಲ್ ಸಹಕಾರ ಬ್ಯಾಂಕಿನ ಕೇಂದ್ರ ಕಛೇರಿಯು ಬಾಡಿಗೆ ಕಟ್ಟಡದಲ್ಲಿದೆಯೆ?*

ಆ) *ಹಾಗಿದ್ದಲ್ಲಿ ಮಾಹೆಯಾನ ಪಾವತಿ ಮಾಡುತ್ತಿರುವ ಬಾಡಿಗೆ ಎಷ್ಟು?*

ಇ) *ಸದರಿ ಕಟ್ಟಡದ ಮಾಲೀಕರು ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರಾಗಿರುವುದು ನಿಜವೆ?*

ಈ) *ಬಾಡಿಗೆಯನ್ನು ಲೋಕೋಪಯೋಗಿ ಇಲಾಖೆಯಿಂದ ನಿಗದಿಗೊಳಿಸಿದ ಮೌಲ್ಯೀಕರಣದ ಆಧಾರದ ಮೇಲೆ ಪಾವತಿ ಮಾಡಲಾಗುತ್ತಿದೆಯೆ?*

ಉ) *ಮೇಲಿನ ಬ್ಯಾಂಕಿನ ಶಾಖೆಗಳ ಸಹ ಬಾಡಿಗೆ ಕಟ್ಟಡದಲ್ಲಿದೆಯೇ?*

ಊ) *ಹಾಗಿದ್ದಲ್ಲಿ ಕಟ್ಟಡಗಳ ಮಾಲೀಕರ ಹೆಸರು ಹಾಗೂ ಮಾಹೆಯಾನ ನೀಡುತ್ತಿರುವ ಬಾಡಿಗೆ ಎಷ್ಟು?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ರೂ.7858.81.

ಇ) ಇಲ್ಲ.

ಈ) ಇಲ್ಲ.

ಉ) ಹೌದು.

ಊ)

ಶಾಖೆ	ಮಾಲೀಕರು	ಬಾಡಿಗೆ
1) ಜಯನಗರ	ಶ್ರೀ ಗೋವಿಂದರಾಜು	6020
2) ಬನಶಂಕರಿ 2ನೇ ಹಂತ	ಶ್ರೀ ಪಿ. ಮುನಿಸ್ವಾಮಿ	12912.50
3) ಕೇಂದ್ರ ಕಛೇರಿ	ಶ್ರೀ ನಿಜಗುಣಸ್ವಾಮಿ	7858

ನ್ಯಾಷನಲ್ ಸಹಕಾರಿ ಬ್ಯಾಂಕ್ ನಿಯಮಿತ ಬೆಂಗಳೂರು ಶೇರುದಾರರ ಸಂಖ್ಯೆ

2788 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) ; ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಿನಾಂಕ : 31ನೇ ಜುಲೈ 1991 ರಂದು ಇದ್ದಂತೆ ನ್ಯಾಷನಲ್ ಸಹಕಾರಿ ಬ್ಯಾಂಕು ನಿಯಮಿತ, ಬೆಂಗಳೂರು ಇದರ ಶೇರುದಾರರ ಒಟ್ಟು ಸಂಖ್ಯೆ ಎಷ್ಟು?*

ಆ) *ಶೇರುದಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸಹಕಾರ ಇಲಾಖೆಯಿಂದ ಈ ಬ್ಯಾಂಕಿಗೆ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸಿದೆಯೇ?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) ;

ಅ) 8225.

ಆ) ಸಹಕಾರ ಇಲಾಖೆಯಿಂದ ಆಂತರಿಕ ಲೆಕ್ಕ ಪರಿಶೋಧಕರನ್ನು ಆಯಾ ಸಂಘದ ಬೇಡಿಕೆ ಮೇಲೆ ಮಾಡಲಾಗುವುದು. ಈ ಬ್ಯಾಂಕಿನಿಂದ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸಲು ಕೋರಿಕೆ ಬಂದಿರುವುದಿಲ್ಲ.

ನ್ಯಾಷನಲ್ ಸಹಕಾರ ಬ್ಯಾಂಕ್ "ಲಿ" ಅಧಿಕಾರ ವರ್ಗ ಮಹಾಸಭೆಯ ಬಗ್ಗೆ

2780 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ; ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಷನಲ್ ಸಹಕಾರ ಬ್ಯಾಂಕ್ ಲಿ,ನ ಅಧಿಕಾರ ವರ್ಗದವರು ಬ್ಯಾಂಕಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಪ್ರಾರಂಭದಿಂದ ದಾಖಲಿಸುತ್ತಿಲ್ಲದಿರುವುದು ನಿಜ ಸಂಗತಿಯೇ?

ಆ) ಹಾಗಿದ್ದಲ್ಲಿ ಮಹಾಸಭೆ ನಡವಳಿಕೆಯನ್ನು ದಾಖಲಿಸುತ್ತಿಲ್ಲದ ಬಗ್ಗೆ ಸರ್ಕಾರವು ಕೈಗೊಂಡ ಕ್ರಮ ಏನು?

ಇ) ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ದಾಖಲಿಸುವಂತೆ ಮತ್ತು ಸದರಿ ನಡವಳಿಕೆಗಳನ್ನು ಷೇರುದಾರರಿಗೆ ಸಭೆಯ ನಂತರ ಕಳುಹಿಸುವಂತೆ ಸರ್ಕಾರದವರು ತಿಳಿಸಿದ್ದಾರೆಯೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬ್ಯಾಂಕಿಗೆ ಬೈಲಾಗಳ ಪ್ರಕಾರ ಕ್ರಮ ತೆಗೆದುಕೊಳ್ಳಲು ಸೂಚನೆಗಳನ್ನು ಕೊಡಲಾಗುವುದು.

ಬೆಂಗಳೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಬೋಧಿಸಲಾಗುತ್ತಿರುವ ವಿಷಯಗಳ ಬಗ್ಗೆ.

2513 - ಶ್ರೀ ಸಿ. ಬೈರೇಗೌಡ (ವೇಮಗಲ್) ; ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಪದವಿ ಮಟ್ಟದಲ್ಲಿ ವಿಜ್ಞಾನದ ಯಾವ ಯಾವ ವಿಷಯಗಳನ್ನು ಬೋಧಿಸಲಾಗುತ್ತದೆ?

ಆ) ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಯಾವ ಯಾವ ವಿಷಯಗಳನ್ನು ಬೋಧಿಸಲಾಗುತ್ತಿದೆ?

ಇ) ಸೇರಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ ಎಷು?

ಈ) ಮಹಾರಾಣಿ ವಿಜ್ಞಾನ ಕಾಲೇಜು, ಬೆಂಗಳೂರು ಇಲ್ಲಿ ಕಂಪ್ಯೂಟರ್ ಡಿಪ್ಲೊಮ ಕೋರ್ಸ್‌ನ್ನು ಕೂಡ ನಡೆಸಲಾಗುತ್ತಿದೆ ಎಂಬ ಅಂಶ ನಿಜವೇ?

ಉ) ಹಾಗಿದ್ದಲ್ಲಿ ಎಷು ವಾರ್ಷಿಕ ಶುಲ್ಕ ವಿಧಿಸಿದೆ?

ಊ) ಡಿಪ್ಲೋಮ ಕೋರ್ಸನ್ನು ನಡೆಸಲು ಅವಕಾಶವಿದೆಯೇ?

ಋ) ಹಾಗಿದ್ದಲ್ಲಿ ಯಾರು ಕೋರ್ಸ್‌ನ್ನು ನಡೆಸುವರು ಮತ್ತು ಇದಕ್ಕೆ ಸರ್ಕಾರದ' ಪೂರ್ವಾನುಮತಿ ಪಡೆಯಲಾಗಿದೆಯೇ?

ಋ) ಹಾಗಿದ್ದಲ್ಲಿ ಎಂದು ಸರ್ಕಾರ ಅನುಮತಿ ನೀಡಿದೆ?

ಎ) ಡಿಪ್ಲೋಮಾ ಕೋರ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷು?